ಗಳು ಅಲ್ಲಿ ನಡೆಯುತ್ತಿರುವಂತೆ ಮಾಡಿ ಜನರಿಗೆ ಅನುಕೂಲಮಾಡಲು ಏರ್ಪಾಡುಮಾಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪನವರು :—' ಬೆಟ್ಟ ಅಗೆದು ಇಲಿ ಹಿಡಿದಂತೆ ' ಆಗಬಾರದು. ಅದರಿಂದ ಅಂಥ ಪ್ರತಿಫಲ ಬರುತ್ತದೆಯೆಂದು ಕಂಡು ಬಂದರೆ ಮಾತ್ರ ಮಾಡಬಹುದು.

Projects for Water Supply to Periyapatna Taluk and its Series.

Q. 292—**Sri S. M. MARIYAPPA** (Periyapatna).—

Will the Government be pleased to state:—

(a) how many projects are prepared to improve water supply to Periyapatna Taluk and its series;

(b) when they are going to take up these projects ?

A.—**Sri Kadidal MANJAPPA** (Minister for Revenue and Public Works).—

(a) Three.

(b) After the projects are sanctioned and funds provided.

ಶ್ರೀ ಎಸ್. ಎಂ. ಮರಿಯಪ್ಪನವರು :—(ಎ) ಪ್ರಶ್ನೆಗೆ ಉತ್ತರವಾಗಿ ಮೂರು ಯೋಜನೆಗಳನ್ನು ತಯಾರಿಸಲಾಯಿತೆಂದು ಹೇಳಿದ್ದೀರಿ. ಅವು ಎಲ್ಲಿ ಪ್ರಾರಂಭವಾಗುತ್ತವೆ ? ಮತ್ತು ಎಲ್ಲಿ ನಿಲ್ಲುತ್ತವೆ ?

Sri Kadidal MANJAPPA.—Opening a feeder channel to Periyapatna by cutting across the Visweswara Betta called Niblur Project. Opening a feeder channel, series of tanks, from Navale, near Kogilavadi called Kogialvadi Project. Preliminary project for opening a feeder channel to Kankere and Hirekere in Periyapatna Taluk.

ಶ್ರೀ ಎಸ್. ಎಂ. ಮರಿಯಪ್ಪನವರು.—ಪ್ರತಿಯೊಂದಕ್ಕೂ ಅಂದಾಜುಮಾಡಲಾಗಿರುವ ಮೊಬಲಗೆಷ್ಟು?

ಶ್ರೀ ಕಡಿದಾಳ್ ಮಂಜಪ್ಪನವರು.—(1) ನಿಬ್ಬಲೂರು ಪ್ರಾಜೆಕ್ಟಿಗೆ 1 ಲಕ್ಷ 71 ಸಾವಿರ ರೂಪಾಯಿ.
(2) ಕೋಗಿಲೂರು ಪ್ರಾಜೆಕ್ಟಿಗೆ 83 ಸಾವಿರ ರೂಪಾಯಿ
(3) ಮತ್ತೊಂದು ಪ್ರಾಜೆಕ್ಟ್‌ಗೆ 1 ಲಕ್ಷ 76 ಸಾವಿರ ರೂಪಾಯಿ.

ಶ್ರೀ ಎಸ್. ಎಂ. ಮರಿಯಪ್ಪನವರು.—ಈ ಪ್ರತಿಯೊಂದು ಯೋಜನೆಯಿಂದಲೂ ಎಷ್ಟೆಷ್ಟು ಕೆರೆಗಳಿಗೆ ನೀರನ್ನು ನರಬರಾಯಿಮಾಡಬಹುದು ?

Sri Kadidal MANJAPPA.—I cannot readily furnish the answer.

ಶ್ರೀ ಎಸ್. ಎಂ. ಮರಿಯಪ್ಪನವರು.—ತಾವು ಬಜೆಟ್ಟಿನಲ್ಲಿ ಒದಗಿಸಿರುವ ಮೊಬಲಗನ್ನು ಯಾವುದಕ್ಕೆ ಖಾಸಲಾಗಿಟ್ಟಿದ್ದೀರಿ ?

Mr. SPEAKER.—That is no supplementary. The Hon'ble Member may put specific supplementaries if he has any.

ಶ್ರೀ ಡಿ. ದೇವರಾಜ ಅರಸಿನವರು (ಹುಣಸೂರು).—ಇನ್ನೂ ನಿಬ್ಬಲೂರು ಪ್ರಾಜೆಕ್ಟ್ ಮಂಜೂರಾಗಿ ಬಂದಿಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪನವರು.—ಇಲ್ಲ.

ಶ್ರೀ ಡಿ. ದೇವರಾಜ ಅರಸಿನವರು.—ಅಂದಾಜು ಮಂಜೂರಾಗಿ ಬಂದಿಲ್ಲವೇ ?

Sri Kadidal MANJAPPA.—It is under serutiny in the Chief Engineer's Office.

Sri D. DEVARAJA URS.—Is that project likely to be taken up ?

Sri Kadidal MANJAPPA.—I cannot tell the Hon'ble Member now.

ಶ್ರೀ ಬಿ. ರಾಚಯ್ಯನವರು (ಯಳಂದೂರು-ಅನುಸೂಚಿತ ಜಾತಿಗಳು).—ಪ್ರತಿಯೊಂದು ಪ್ರಾಜಿಕ್ಟಿನ ಕೆಳಗೂ ಎಷ್ಟೆಷ್ಟು ಎಕರೆ ನೀರು ಸಾಗಿಗೆ ಬರುತ್ತೆಂಬುದನ್ನು ಹೇಳುವಿರಾ ?

Mr. SPEAKER.—The Minister wants notice.

ಶ್ರೀ ಜಿ. ಪುಟ್ಟಸ್ವಾಮಿಯವರು (ಚಿಕ್ಕಮಗಳೂರು-ಮೂಡಿಗೆರೆ—ಅನುಸೂಚಿತ ಜಾತಿಗಳು).—ಬೇರೆ ಗ್ರಾಮದ 10-20 ಜನರು ಈ ನಾಲೆ ನೀರನ್ನು ಕೊಡಬೇಕೆಂದು ಕೇಳಿಕೊಂಡಿರುವುದು ನಿಜವೇ ?

Mr. SPEAKER.—That does not arise.

Bangalore-Nilgiri Road.

Q.–354. **Sri H. K. SHIVARUDRAPPA** (Gundlupet-Heggaddevankote).—

Will the Government be pleased to state :—

(*a*) the average number of vehicles that ply every day from Gundlupet to Mysore and onwards;

(*b*) whether it has come to their notice that the Bangalore-Niligiri Road has very much deteriorated;

(*c*) whether the concrete road that is being constructed near 104th and 105th miles will be extended up to the border of our taluk;

(*d*) if so, when it will be completed ?

A.—**Sri Kadidal MANJAPPA** (Minister for Revenue and Public Works).—

(*a*) 12 buses and about 150 lorries.

(*b*) Yes.

(*c*) and (*d*) The present programme is to cement a total length of 50 furlongs

(SRI KADIDAL MANJAPPA)

from 1/103 to 2/109 at an estimated cost of Rs. 2,50,000. This means an additional length of 3 miles and 2 furlongs beyond the 105th mile will be cement-concreted. The further distance to the border will be about 31 miles. Eventually, the idea is to cement concrete the entire length up to the State boundary, as and when funds permit.

ಶ್ರೀ ಎಚ್. ಕೆ. ಶಿವರುದ್ರಪ್ಪನವರು.—ತಾವು (ಸಿ) ಮತ್ತು (ಡಿ) ಗಳಿಗೆ ಉತ್ತರ ಕೊಟ್ಟಿರುವ ಪ್ರಕಾರ ಆ ಸಿಮೆಂಟ್ ರಸ್ತೆಯನ್ನು ಇಲಾಖಾ ಮುಖೇನ ಮಾಡಿಸುತ್ತೀರೋ ಅಥವಾ ಕಾಂಟ್ರಾಕ್ಟ್ ಮೂಲಕ ಮಾಡಿಸುತ್ತೀರೋ ?

ಶ್ರೀ ಕಡಿದಾಳ್ ಮಂಜಪ್ಪನವರು.—ನೋಟೀಸ್.

ಶ್ರೀ ಎಚ್. ಕೆ. ಶಿವರುದ್ರಪ್ಪನವರು.—ಈ ರಸ್ತೆ ಗುಂಡ್ಲು ಹೇಜೆ ಸಬ್‌ಡಿವಿಜನ್‌ಗೆ ಸೇರುತ್ತದೆಯೋ ಅಥವಾ ನಂಜನಗೂಡು ಸಬ್‌ಡಿವಿಜನ್‌ಗೆ ಸೇರಿರುತ್ತದೆಯೋ ?

Sri Kadidal MANJAPPA.—I cannot tell you just now.

ಶ್ರೀ ಎಚ್. ಕೆ. ಶಿವರುದ್ರಪ್ಪನವರು.—ಇದನ್ನು ಪರಿಶೀಲನೆ ಮಾಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪನವರು.—ಮಾಡುತ್ತೇವೆ.

ಶ್ರೀ ಎಚ್. ಕೆ. ಶಿವರುದ್ರಪ್ಪನವರು.—ಇದನ್ನು ಗುಂಡ್ಲು ಹೇಜೆ ಸಬ್ ಡಿವಿಜನ್ನಿನವರೇ ಮಾಡಿಸುವಂತೆ ಮಾಡಲು ಆಲೋಚನೆ ಮಾಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪನವರು.—ನೋಡೋಣ.

Reservoir across Jampadahalla.

Q.—363. Sri T. NAGAPPA (Tarikere)—.

Will the Government be pleased to state:—

(*a*) when the suggestion to construct a reservoir across the Jampadahalla near Dugalapur Village, Tarikere Kasaba, Tarikere Taluk, was first received by them;

(*b*) when the report of the preliminary survey conducted on the above suggestion was received;

(*c*) the number of times surveys have been conducted till now and the amount spent for the same;

(*d*) the action taken by them in regard to the construction of this reservoir?

A.—Sri Kadidal MANJAPPA (Minister for Revenue and Public Works).—

(*a*) In 1947.

(*b*) In 1947.

(*c*) Surveys were conducted twice. No separate account is maintained for Jampadahalla surveys since the work was attended to by the Survey Sub-Division (Bhadra Reservoir Project Sub-Division). The expenditure for the preparation of the surveys and project may approximate to about Rs. 2,000 in all.

(*d*) The project is under consideration of Government.

ಶ್ರೀ ಟಿ. ನಾಗಪ್ಪನವರು.—(ಎ) ಪ್ರಶ್ನೆಗೆ ಉತ್ತರವಾಗಿ 47ನೇ ಇಸವಿಯಲ್ಲಿ ಇದರ ಮೊದಲು ಸಲಹೆ ಬಂತೆಂದು ಹೇಳಿದ್ದೀರಿ? ಅದಕ್ಕಿಂತಲೂ ಮೊದಲೇ ಬಂದಿತ್ತೆಂಬುದು ತಮಗೆ ಗೊತ್ತಿಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪನವರು.—ಇಲ್ಲ.

ಶ್ರೀ ಟಿ. ನಾಗಪ್ಪನವರು.—ಮೊದಲನೆಯ ಸರ್ವೇ ವರದಿ ಬಂದದ್ದು ಯಾರ ಕಾಲದಲ್ಲಿ ?

ಶ್ರೀ ಕಡಿದಾಳ್ ಮಂಜಪ್ಪನವರು.—ನೋಟೀಸ್.

ಶ್ರೀ ಟಿ. ನಾಗಪ್ಪನವರು.—47ನೇ ಸಾಲಿನಲ್ಲಿ ಆದ ಸರ್ವೇ ವರದಿ ಬಂದ ಎಷ್ಟು ವರ್ಷಗಳ ಮೇಲೆ 2ನೇ ಸರ್ವೆ ನಡೆಸಲಾಯಿತು ?

ಶ್ರೀ ಕಡಿದಾಳ್ ಮಂಜಪ್ಪನವರು.—ಅದನ್ನು ನಾನು ಈಗ ಹೇಳಲಾರೆ.

ಶ್ರೀ ಟಿ. ನಾಗಪ್ಪನವರು.—(ಸಿ) ಮತ್ತು (ಡಿ) ಉತ್ತರಗಳನ್ನು ನೋಡಿದ್ದಾಯಿತು. ಇದನ್ನು ಬೇಗ ಪರಿಶೀಲನೆ ಮಾಡಿ ಕೆಲಸ ನಡೆಸುವಂತೆ ಭರವಸೆ ಕೊಡುವಿರಾ ?

ಶ್ರೀ ಕಡಿದಾಳ್ ಮಂಜಪ್ಪನವರು.—ಹಣದ ಅಭಾವವಿರತಕ್ಕ ಈ ಕಾಲದಲ್ಲಿ ಅಂಥ ಭರವಸೆ ಕೊಡಲು ಆಗುವುದಿಲ್ಲ.

ಶ್ರೀ ಟಿ. ನಾಗಪ್ಪನವರು.—ಈ ಆಹಾರಾಭಾವವಿರತಕ್ಕ ಕಾಲದಲ್ಲಿ ಇದನ್ನು ಆದಷ್ಟು ಬೇಗ ಮಾಡಿಸುವುದು ಅನುಕೂಲವಲ್ಲವೇ ! ಮತ್ತೂ ದಿನಗಳು ಜಾಸ್ತಿ ಗತಿಸಿದಂತೆಲ್ಲಾ ಅಂದಾಜು ಮಾಡಿರುವ ಪೊಬಲಗು ಹೆಚ್ಚು ಕಡಿಮೆಯಾಗುವುದಿಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪನವರು.—ಇದರ 2ನೇ ಪರಿಶೀಲನೆಯಲ್ಲಿ ಇದರ ಅಂದಾಜು 15 ಲಕ್ಷ 80 ಸಾವಿರಕ್ಕೆ ಹೋಗಿದೆ. 3,800 ಎಕರೆ ತರಿ ಸಾಗುವಳಿಗೆ ಅನುಕೂಲವಾಗುತ್ತದೆ. ಆದರೆ ಈ ಅಂದಾಜುಗಳೆಲ್ಲವೂ ಕೂಡ ಇನ್ನು ಹೆಚ್ಚಾಗಬಹುದೋ ಏನೋ. ಆದರೆ ಈಗ ಯಾವುದನ್ನೂ ಹೇಳಲಾರೆ.

ಶ್ರೀ ಟಿ. ನಾಗಪ್ಪನವರು.—ಆದಷ್ಟು ಬೇಗ ಮಾಡಿಸುತ್ತೇವೆಂದು ಭರವಸೆ ಕೊಡಬಲ್ಲಿರಾ ?

ಶ್ರೀ ಕಡಿದಾಳ್ ಮಂಜಪ್ಪನವರು.—ಹಣ ಒದಗಿದರೆ ಆಲೋಚನೆ ಮಾಡಲಾಗುತ್ತದೆ.

ಶ್ರೀ ಬಿ. ಹುಚ್ಚೇಗೌಡರು (ತುರುವೇ ಕೆರೆ).—ಭದ್ರಾ ಅಣೆಕಟ್ಟಿನ ನೀರು ಇದಕ್ಕೆ ಬರುತ್ತದೆಯೇ ?

ಶ್ರೀ ಕಡಿದಾಳ್ ಮಂಜಪ್ಪನವರು.—ನೋಟೀಸ್.

ಶ್ರೀ ಬಿ. ಹುಚ್ಚೇಗೌಡರು.—ಸರ್ವೆಯ ಕಾಲದಲ್ಲಿ ಇದನ್ನೆಲ್ಲಾ ಪರಿಶೀಲನೆ ಮಾಡಿಲ್ಲವೇ ?